ಓ.ಎಸ್. ನಂಃ 198/2019

**<u>ಪಿಡಬ್ಲ್ಯೂಃ1</u>**

**ದಿನಾಂಕಃ 05.08.2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ರ ಪರ ಶ್ರೀ ಕೆ.ಬಿ.ಜಿ ವಕೀಲರಿಂದಃ</u>**

1. ನಾನು ಅವಿದ್ಯಾವಂತನಾಗಿರುತ್ತೇನೆ. ದಾವಾ ಆಸ್ತಿಯ ಖಾತೆಯನ್ನು ನಮಗೆ ಮಾಹಿತಿ ಇಲ್ಲದ ಹಾಗೆ ಪ್ರತಿವಾದಿ ಸಂಖ್ಯೆ 1(ಎ) ರವರು ತಮ್ಮ ಹೆಸರಿಗೆ ಮಾಡಿಸಿರುವ ಕಾರಣ ಸದರಿಯವರ ವಿರುದ್ಧ ನಾನು ಈ ದಾವೆಯನ್ನು ಹೂಡಿರುತ್ತೇನೆ. ನಾನು ವಾದ ಪತ್ರಕ್ಕೆ ನನ್ನ ಸಹಿಯನ್ನು ಹಾಕಿರುವುದಿಲ್ಲ. ನನ್ನ ಮುತ್ತಾತನ ಹೆಸರು ವಯ್ಯ @ ಬೋರಯ್ಯ ಅಂತ ಇರುತ್ತದೆ ಎಂದರೆ ಸರಿ. ಸದರಿ ವಯ್ಯ @ ಬೋರಯ್ಯರವರ ಮಗ ದೊಡ್ಡ ಈರಯ್ಯ ಎಂದರೆ ಸರಿ. ಸದರಿ ದೊಡ್ಡ ಈರಯ್ಯ ಬಿನ್ ವಯ್ಯ @ ಬೋರಯ್ಯ ಇವರಿಗೆ ಒಟ್ಟು 2 ಜನ ಮಕ್ಕಳು. ಅವರ ಹೆಸರು ಕರಿಬಸವಯ್ಯ ಮತ್ತು ಚಿಕ್ಕ ಈರಯ್ಯ ಅಂತ ಇರುತ್ತದೆ. ಸದರಿ ಮಾತು ಸುಳ್ಳು ಎಂದರೆ ಸರಿಯಲ್ಲ. ದೊಡ್ಡ ಈರಯ್ಯ ಬಿನ್ ವಯ್ಯ @ ಬೋರಯ್ಯ ಇವರ ಮಕ್ಕಳ ಹೆಸರು ದೊಡ್ಡ ಈರಯ್ಯ ಮತ್ತು ಚಿಕ್ಕಈರಯ್ಯ ಅಂತ ಇರುತ್ತದೆ ಎಂದರೆ ಸರಿಯಲ್ಲ.

2. ನಾವು ದೊಡ್ಡ ಈರಯ್ಯರವರ ಹಿರಿಮಗನಾದ ದೊಡ್ಡ ಈರಯ್ಯ ರವರ ವಾರಸುದಾರರು ಮತ್ತು ಪ್ರತಿವಾದಿಯರು ದೊಡ್ಡ ಈರಯ್ಯರವರ ಕಿರಿಯ ಮಗನಾದ ಚಿಕ್ಕಈರಯ್ಯರವರ ವಾರಸುದಾರರು ಎಂದರೆ ಸರಿಯಲ್ಲ. ದೊಡ್ಡ ಈರಯ್ಯರವರ ಹಿರಿಯ ಮಗನಾದ ದೊಡ್ಡ ಈರಯ್ಯರವರಿಗೆ ಕರಿಬಸವಯ್ಯ ಮತ್ತು ತಮ್ಮಯ್ಯ ಎನ್ನುವ ಮಕ್ಕಳಿರುತ್ತಾರೆ ಎಂದರೆ ಸರಿಯಲ್ಲ. ದೊಡ್ಡ ಈರಯ್ಯರವರ ಹಿರಿಮಗನಾದ ದೊಡ್ಡ ಈರಯ್ಯ ರವರಿಗೆ ಲಕ್ಷ್ಮಮ್ಮ ಎನ್ನುವ ಹೆಂಡತಿ ಇದ್ದರು ಎಂದರೆ ಸರಿ. ಕರಿಬಸವಯ್ಯ ಬಿನ್ ದೊಡ್ಡ ಈರಯ್ಯರವರ ಹೆಂಡತಿಯ ಹೆಸರು ಮರಿಯಮ್ಮ ಎಂದರೆ ಸರಿ. ತಮ್ಮಯ್ಯ ಬಿನ್ ದೊಡ್ಡ ಈರಯ್ಯ ಇವರ ಹೆಂಡತಿಯ ಹೆಸರು ದೇವಮ್ಮ ಅಂತ ಇರುತ್ತದೆ ಎಂದರೆ ಸರಿಯಲ್ಲ. ಸದರಿ ತಮ್ಮಯ್ಯ ಮತ್ತು ದೇವಮ್ಮರವರ ಮಗ ನಾನು ಎಂದರೆ ಸರಿಯಲ್ಲ.

3. ನನ್ನ ತಮ್ಮನ ಹೆಸರು ಮಹದೇವ ಎಂದರೆ ಸರಿ. ದೊಡ್ಡ ಈರಯ್ಯರವರ ಕಿರಿಯ ಮಗನ ಹೆಸರು ಚಿಕ್ಕ ಈರಯ್ಯ ಎಂದರೆ ಸರಿಯಲ್ಲ. ಸದರಿ ಚಿಕ್ಕ ಈರಯ್ಯರವರಿಗೆ ಮೊದಲನೇಯ

ಹೆಂಡತಿ ಲಕ್ಷ್ಮಮ್ಮ ಮತ್ತು 2 ನೇ ಹೆಂಡತಿ ಕಾಳಮ್ಮ ಇರುತ್ತದೆ ಎಂದರೆ ಸರಿಯಲ್ಲ. ಚಿಕ್ಕ ಈರಯ್ಯರವರಿಗೆ ತಮ್ಮ ಮೊದಲನೇಯ ಹೆಂಡತಿಯಾದ ಲಕ್ಷ್ಮಮ್ಮರವರಿಂದ ಈರಯ್ಯ ಎನ್ನುವ ಮಗನಿದ್ದ ಎಂದರೆ ಸಾಕ್ಷಿಯು ಅವರಿಗೂ ನಮಗೂ ಯಾವುದೇ ಸಂಬಂದವಿಲ್ಲ ಎಂದು ನುಡಿದಿರುತ್ತಾರೆ. ಸದರಿ ಈರಯ್ಯ ಬಿನ್ ಚಿಕ್ಕ ಈರಯ್ಯರವರ ಹೆಂಡತಿಯೇ 1 ನೇ ಪ್ರತಿವಾದಿ ಎಂದರೆ ಸಾಕ್ಷಿಯು ನನಗೆ ಅವರ ಪರಿಚಯವೇ ಇಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ 2 ನೇ ಪ್ರತಿವಾದಿಯು ಚಿಕ್ಕ ಈರಯ್ಯರರಿಗೆ ತಮ್ಮ 2 ನೇ ಹೆಂಡತಿಯಾದ ಕಾಳಮ್ಮರವರಿಂದ ಜನಿಸಿದ ಮಗನಾಗಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಅವರ ಪರಿಚಯವೇ ಇಲ್ಲ ಎಂದು ನುಡಿದಿರುತ್ತಾರೆ.

4. ನಿಮ್ಮ ತಂದೆ ದಿನಾಂಕ 07.03.2013 ರಂದು ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ತಂದೆಯವರು ಮರಣ ಹೊಂದಿರುವುದು ನಿಜ ಆದರೆ ನನಗೆ ಅವರು ಮರಣ ಹೊಂದಿದ ದಿನಾಂಕ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿಃ 07.03.2013 ರಂದು ನಿಮ್ಮ ತಂದೆಯವರು ಮರಣ ಹೊಂದಿದ ಬಗ್ಗೆ ಜನನ ಮತ್ತು ಮರಣ ರೆಜಿಸ್ಟರ್ ನಲ್ಲಿ ನಮೂದಾಗಿದ್ದು ಅದರಂತೆ ಪ್ರತಿವಾದಿ ಸಂಖ್ಯೆ 1(ಎ) ರವರಿಗೆ ನಿಮ್ಮ ತಂದೆಯ ಮರಣ ಪ್ರಮಾಣ ಪತ್ರವನ್ನು ಜನನ ಮತ್ತು ಮರಣ ನೊಂದಣಾಧಿಕಾರಿಗಳು ನೀಡಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಬೆನ್ನ ಹಿಂದೆ ಅವರು ಏನು ಮಾಡಿರುತ್ತಾರೆ ಎಂದು ನಮಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ತಮ್ಮಯ್ಯರವರು ದಿಃ 07.03.2013 ರಂದು ಮರಣ ಹೊಂದಿರುತ್ತಾರೆ ಎಂದು ಜನನ ಮತ್ತು ಮರಣ ರೆಜಿಸ್ಟರ್ ನಲ್ಲಿ ನೊಂದಣಿಯಾಗಿರುತ್ತದೆ ಎಂದರೆ ಸರಿ.

5. ದಿಃ 01.02.2013 ರಂದು ತಮ್ಮಯ್ಯರವರು ಮರಣ ಹೊಂದಿರುತ್ತಾರೆ ಎಂದು ಹೇಳಿ ನಾವು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಮರಣ ಪ್ರಮಾಣ ಪತ್ರವನ್ನು ಪಡೆದಿರುತ್ತೇವೆ ಎಂದರೆ ಸರಿ. ತಮ್ಮಯ್ಯರವರ ಹೆಸರಿನ ಮುಂದೆ @ ಚಿಕ್ಕ ಈರಯ್ಯ ಎಂದು ಹೆಸರು ಸೇರಿಸುವ ಉದ್ದೇಶದಿಂದ ನಾವು ಬೇರೆ ಮರಣದ ದಿನಾಂಕವನ್ನು ನೀಡಿ ನ್ಯಾಯಾಲಯದಿಂದ ಮರಣ ಪ್ರಮಾಣ ಪತ್ರ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ದೇವಮ್ಮರವರು ದಿಃ 21.03.2008 ರಂದು ಮರಣ ಹೊಂದಿರುತ್ತಾರೆ ಎಂದು ಹೇಳಿ ನಾವು ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿ ಅವರ ಮರಣ ಪ್ರಮಾಣ ಪತ್ರವನ್ನು ಪಡೆದಿರುತ್ತೇವೆ ಎಂದರೆ ಸರಿ. ದೇವಮ್ಮರವರ ಗಂಡನ ಹೆಸರು ತಮ್ಮಯ್ಯ ಎಂದು ಇದ್ದು ಸದರಿ ತಮ್ಮಯ್ಯರವರ ಹೆಸರಿನ ಮುಂದೆ ಅಲಿಯಾಸ ಚಿಕ್ಕ ಈರಯ್ಯ ಎಂದು ಸೇರಿಸುವ ಉದ್ದೇಶದಿಂದ ನಾವು ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿ ಸದರಿಯವರ ಮರಣ ಪ್ರಮಾಣ ಪತ್ರವನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ.

6. ನಮ್ಮ ಕುಟುಂಬದ ಪಡಿತರ ಚೀಟಿಯನ್ನು ನಾವು ಮೊದಲು ನಮ್ಮ ತಂದೆಯಾದ ತಮ್ಮಯ್ಯ @ ಚಿಕ್ಕ ಈರಯ್ಯರವರ ಹೆಸರಿನಲ್ಲಿ ಪಡೆದಿರುತ್ತೇವೆ. ನಮ್ಮ ಕುಟುಂಬದ ಪಡಿತರ ಚೀಟಿಯ ಸಂಖ್ಯೆ 220300141279. ಸಾಕ್ಷಿಗೆ ಈಗ ಅವರ ಕುಟುಂಬದ ಪಡಿತರ ಚೀಟಿಯ ದೃಡಿಕೃತ ನಕಲನ್ನು ತೋರಿಸಿ ಸದರಿ ಪಡಿತರ ಚೀಟಿಯು ತಮ್ಮ ಹೆಂಡತಿಯಾದ ಜಯಮ್ಮರವರ ಹೆಸರಿನಲ್ಲಿ ಇರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನೋಡಿ ಹೌದು ಎಂದು ಉತ್ತರಿಸಿದ್ದು ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ಚಿಕ್ಕ ಈರಯ್ಯ ಬಿನ್ ತಮ್ಮಯ್ಯರವರಿಗೆ ಸೇರಿದ ಪಡಿತರ ಚೀಟಿಯನ್ನು ನೀಡುವಂತೆ ಮಾಹಿತಿ ಹಕ್ಕಿನಲ್ಲಿ ಕೋರಿದಾಗ ನಿಡಿ.1 ರ ಪಡಿತರ ಚೀಟಿಯನ್ನು ಮಾಹಿತಿ ಹಕ್ಕು ಅಧಿಕಾರಿಗಳು ನೀಡಿರುತ್ತಾರೆ ಎಂದರೆ ಸರಿಯಲ್ಲ.

7. ಈ ಹಿಂದೆ ನಮ್ಮ ಕುಟುಂಬಕ್ಕೆ ಸೇರಿದ ಪಡಿತರ ಚೀಟಿ ಸಂಖ್ಯೆ ಕೆ.ಆರ್.ಎನ್.ಯು.00110249 ಇತ್ತು ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ಪಡಿತರ ಚೀಟಿ ಸಂಖ್ಯೆ ಕೆ.ಆರ್.ಎನ್.ಯು.00110249 ರ ಜೆರಾಕ್ಸ ಪ್ರತಿಯನ್ನು ತೋರಿಸಿ ಅದರಲ್ಲಿರುವ ಚಿಕ್ಕ ಈರಯ್ಯ ಬಿನ್ ತಮ್ಮಯ್ಯ ಎನ್ನುವ ವ್ಯಕ್ತಿಯ ಪೋಟೋ ತನ್ನದೇ ಪೋಟೊ ಎಂದು ನೋಡಿ ಗುರುತಿಸಿರುತ್ತಾರೆ. ಮುಂದುವರೆದು ಸದರಿ ಪಡಿತರ ಚೀಟಿಯಲ್ಲಿ ಇರುವ ಜಯಮ್ಮ ಎನ್ನುವ ಮಹಿಳೆಯ ಪೋಟೊವನ್ನು ನೋಡಿ ಸಾಕ್ಷಿಯು ಸದರಿ ಮಹಿಳೆ ತನ್ನ ಹೆಂಡತಿ ಮತ್ತು ಎಂ.ಸಿ.ಲೋಕೇಶ ಹಾಗೂ ಎಂ.ಸಿ.ರಮೇಶ ಎನ್ನುವ ಪೋಟೊಗಳನ್ನು ನೋಡಿ ಅವರು ತಮ್ಮ ಮಕ್ಕಳು ಎಂದು ಗುರುತಿಸಿರುತ್ತಾರೆ. ನನಗೆ ಒಟ್ಟು 5 ಜನ ಮಕ್ಕಳಿದ್ದು, ನನ್ನ ಕುಟುಂಬದ ಪಡಿತರ ಚೀಟಿಯಲ್ಲಿ ನನ್ನ ಮಕ್ಕಳಾದ ಎಂ.ಸಿ.ರಮೇಶ ಮತ್ತು ಎಂ.ಸಿ.ಲೊಕೇಶ ರವರನ್ನು ಮಾತ್ರ ಸೇರಿಸಿದ್ದು, ನನ್ನ ಉಳಿದ 3 ಮಕ್ಕಳಾದ ನಾಗರಾಜು, ಮಂಜು ಹಾಗೂ ಸುರೇಶ ರವರು ತಮ್ಮ ಕುಟುಂಬದ ಪ್ರತ್ಯೇಕ ಪಡಿತರ ಚೀಟಿಯನ್ನು ಮಾಡಿರುವುದರಿಂದ ಅವರನ್ನು ನನ್ನ ಕುಟುಂಬದ ಪಡಿತರ ಚೀಟಿಯಲ್ಲಿ ಸೇರಿಸಿರುವುದಿಲ್ಲ.

8. 2 ನೇ ವಾದಿ ನನ್ನ ಖಾಸ ತಮ್ಮ. ಸಾಕ್ಷಿಗೆ ಈಗ ಕೃಷ್ಣರಾಜನಗರ ವಿಧಾನಸಭಾ ಮತದಾರರ ನೊಂದಣಾಧಿಕಾರಿಯವರು ನೀಡಿರುವ ಚುನಾವಣೆ ಗುರುತಿನ ಚೀಟಿ ಸಂಖ್ಯೆ 453367 ನ್ನು ತೋರಿಸಿ ಅದರಲ್ಲಿರುವ ವ್ಯಕ್ತಿಯನ್ನು ಸಾಕ್ಷಿಯು ನೋಡಿ ಸದರಿ ವ್ಯಕ್ತಿಯು 2 ನೇ ವಾದಿ ಎಂದು ನೋಡಿ ಗುರುತಿಸಿರುತ್ತಾರೆ. ಸದರಿ ಚುನಾವಣೆ ಗುರುತಿನ ಚೀಟಿ ಸಂಖ್ಯೆ 453367 ರಲ್ಲಿ 2 ನೇ ವಾದಿಯ ಹೆಸರು ಮಹದೇವಯ್ಯ ಬಿನ್ ತಮ್ಮಯ್ಯ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತಮ್ಮಯ್ಯ ಮತ್ತು ಚಿಕ್ಕ ಈರಯ್ಯ ಇಬ್ಬರು ಒಂದೇ ವ್ಯಕ್ತಿ ಆಗಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ.

9. ದಿನಾಂಕ 29.05.1995 ರಂದು ಮಧುವನಹಳ್ಳಿ ಗ್ರಾಮದ ಸರ್ವೆ ನಂಬರ್ 95/1 ರ 18 ಗುಂಟೆ ಜಮೀನು ನಿಮ್ಮ ತಂದೆ ತಮ್ಮಯ್ಯ ಬಿನ್ ದೊಡ್ಡ ಈರಯ್ಯ ರವರಿಗೆ ಸರಕಾರದಂದ ಮಂಜೂರಾಗಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಸದರಿ ಜಮೀನು ನನ್ನ ತಾತನಾದ ದೊಡ್ಡ ಈರಯ್ಯರವರಿಗೆ ಮಂಜೂರಾಗಿರುತ್ತದೆ ಎಂದು ನುಡಿದಿರುತ್ತಾರೆ. ಮಂಜೂರಾತಿ ಆದೇಶದಲ್ಲಿ ಸದರಿ ಜಮೀನು ತಮ್ಮಯ್ಯ ಬಿನ್ ದೊಡ್ಡ ಈರಯ್ಯರವರಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಜಮೀನಿನ ಮೂಲ ಮಂಜಾರಾತಿ ಆದೇಶವು ನನ್ನ ಬಳಿ ಇರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ. ಸಾಕ್ಷಿಗೆ ಈಗ ಮಧುವನಹಳ್ಳಿ ಗ್ರಾಮದ ಸರ್ವೆ ನಂಬರ್ 95/1 ರ 18 ಗುಂಟೆ ಜಮೀನಿನ ಪಹಣಿಯನ್ನು ತೋರಿಸಿ ಅದರಲ್ಲಿ ಇರುವ 18 ಗುಂಟೆ ಜಮೀನಿನ ಸ್ವಾಧೀನದಲ್ಲಿ ನೀವು ಇದ್ದೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿದಿದ್ದು ಅದನ್ನು ನಿಡಿ.2 ಎಂದು ಗುರುತಿಸಲಾಯಿತು. ನಿಡಿ.2 ರ ದಾಖಲೆಯಲ್ಲಿ ನನ್ನ ತಂದೆಯ ಹೆಸರು ಕೇವಲ ತಮ್ಮಯ್ಯ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ತಮ್ಮಯ್ಯ ಮತ್ತು ಚಿಕ್ಕ ಈರಯ್ಯ ಇವೆರಡೂ ಒಂದೇ ವ್ಯಕ್ತಿಯ ಹೆಸರು ಎಂದು ನುಡಿದಿರುತ್ತಾರೆ. ನಿಡಿ.2 ರಲ್ಲಿ ತಮ್ಮಯ್ಯ ರವರ ಹೆಸರಿನ ಮುಂದೆ ಚಿಕ್ಕ ಈರಯ್ಯ ಎನ್ನುವ ಹೆಸರು ನಮೂದು ಇಲ್ಲ ಎಂದರೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರ ನೀಡಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಕೆ.ಆರ್.ನಗರ.